**<u>ಸಾಕ್ಷಿಯನ್ನು ದಿನಾಂಕಃ 17-12-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ವಾದಿ ಪರ ವಕೀಲರವರಿಂದಃ</u>**

1. ಈ ಕೇಸನ್ನು ಯಾರು ಯಾರ ವಿರುದ್ದ ಹಾಕಿರುವರು ಎಂದು ನನಗೆ ಗೊತ್ತಿಲ್ಲ. ಯಾವುದೆಕ್ಕೆ ಸಂಬಂದ ಪಟ್ಟಂತೆ ಈ ದಾವೆಯನ್ನು ಹಾಕಿರುವರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಪ್ರಮಾಣ ಪತ್ರದಿಲ್ಲ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಲು ನಾನು ಯಾವುದೇ ದಾಖಲೆ ಅಧಾರದ ಮೇಲೆ ವಕೀಲರಿಗೆ ಮಾಹಿತಿ ನೀಡಿರುವುದಿಲ್ಲ. ಕುಸುಮ ಯಾವಾಗ ಮೃತ ಪಟ್ಟರು ಎಂದು ನನಗೆ ಮಾಹಿತಿ ಇರುವುದಿಲ್ಲ. ಕುಸುಮಾರಿಗೆ ಕಣ್ಣು ಕಾಣುತ್ತಿರಲಿಲ್ಲ ಮತ್ತು ಬಿ ಪಿ, ಸಕ್ಕರೆ ಇತ್ತು. ಆ ಬಗ್ಗೆ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಆಕೆಗೆ ಕಾಯಿಲೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಬೆಣ್ಣಹಳ್ಳಿ ಗ್ರಾಮಕ್ಕೆ ಹೋಗಿರುವುದಿಲ್ಲ ಅಂದರೆ ಸರಿ. ತನ್ನ ಗಂಡ ತೀರಿಕೊಂಡ ನಂತರ ಕುಸುಮಾ ಇವರು ಬೆಣ್ಣಹಳ್ಳಿಯಲ್ಲಿ ವಾಸ ಇರಲಿಲ್ಲ ಅಂದರೆ ಸರಿ. ಆದ್ದರಿಂದ ಆಕೆಗೆ ಏನಾಗಿತ್ತು ಎಂದು ನನಗೆ ಮಾಹಿತಿ ಇರುವುದಿಲ್ಲ ಅಂದರೆ ಸರಿ.

2. ಈ ಕೇಸು ಚಾಲ್ತಿಯಲ್ಲಿದ್ದಾಗಲೇ ಉಮದೇವಿಯವರು ಅಸ್ತಿಯನ್ನು ಮಾರಾಟ ಮಾಡಿರುವರು ಅಂದರೆ ಸರಿ. ಕುಸುಮಾರವರು ಅಸ್ತಿಯಲ್ಲಿ ಪಾಲು ವಿಭಾಗವನ್ನು ಕೇಳಿ ದಾವೆ ಸಲ್ಲಿಸಿದ ಕಾರಣ

**ಸಾಕ್ಷಿಯ ಸಹಿ** 17.12.2025

ಉಮದೇವಿಯವರು ಅಸ್ತಿಯನ್ನು ಮಾರಾಟ ಮಾಡಿದರು ಅಂದರೆ ಸರಿಯಲ್ಲ. ಕುಸುಮಾ ಇವರು ಮೃತ ಪಟ್ಟ ನಂತರ ಈ ಕೇಸನ್ನು ಯಾರು ನಡೆಸುತ್ತಿರುವರು ಎಂದು ನನಗೆ ಗೊತ್ತಿಲ್ಲ. ಉಮಾದೇವಿಯವರು ಹೇಳಿಕೊಟ್ಟಂತೆ ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳು್ಳ ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

3. ಕುಸುಮಾ ಇವರಿಂದ ಅವರ ತಂಗಿಯ ಗಂಡ ಸುಳ್ಳು ಮರಣ ಶಾಸನವನ್ನು ಬರೆಸಿಕೊಂಡಿರುವರು ಎಂದು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಸುಳ್ಳಾಗಿ ಬರೆಸಿದ್ದೇನೆ ಅಂದರೆ ಸರಿಯಲ್ಲ. ಕುಸುಮಾ ಮೃತ ಪಡುವ ವರೆಗೆ ಆರೋಗ್ಯವಾಗಿದ್ದರು ಅಂದರೆ ಸರಿಯಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**17-12-2025**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 17.12.2025